

ಅಮೃತವಾಹಿನಿಯೊಂದು ಹರಿಯುತಿದೆ
ಮಾನವನ ಎದೆಯಿಂದಲೆದೆಗೆ ಸತತ.
ಗ್ರೀಷ್ಮಗಳು ನೂರಾರು ಉರಿಸಿದರು ಆರದಿದು
ಸುತ್ತಮುತ್ತಲು ಮರಳು ಮೇಲೆ ಪಾಚಿ.
ಮುತ್ತಿಕೊಂಡರು ಲುಪ್ತವಾಗದೀ ಅಮೃತ ಧುನಿ
ಕಿರಿದಾಗಿ ಬರಿದಾಗಿ ನೀರ ಗೆರೆಯಾಗಿ
ತಳದೊಳೆಲ್ಲೋ ತಳುವಿ ಗುಳುಗುಳಿಸುತಿದೆ ಸೆಲೆಯು
ಏನನೋ ಕಾಯುತಿದೆ ಗುಪ್ತವಾಗಿ.
ಇಂದಲ್ಲ ನಾಳೆ ಹೊಸ ಬಾನು ಬಗೆ ತೆರೆದೀತು
ಕರಗೀತು ಮುಗಿಲ ಬಳಗ
ಬಂದೀತು ಸೊದೆಯ ಮಳೆ, ತುಂಬೀತು ಎದೆಯ ಹೊಳೆ
ತೊಳೆದೀತು ಒಳಗು ಹೊರಗ.
ಈ ಸೆಲೆಗೆ ಆ ಮಳೆಯು ಎದೆಗೆ ಎದೆ ಎದೆ ಹೊಳೆಯು
ಸೇರದಿರೆ ಇಲ್ಲ ನಿಸ್ತಾರ
ಬಂದೆ ಬರಬೇಕಯ್ಯೋ, ಬಂದೆ ತೀರಲು ಬೇಕು
ಈ ಬಾಳಿಗಾ ಮಹಾಪೂರ!

—ಎಂ. ಗೋಪಾಲಕೃಷ್ಣ ಅಡಿಗ

ಎರಡು ವರ್ಷದ ಹಿಂದೆ ನಾವು 'ಕೋವಿಡ್' ಎಂಬ ಕಾಯಿಲೆ ಬಗ್ಗೆ ಕೇಳಿ ಸಹ ಇರಲಿಲ್ಲ. ಈ ಎರಡು ವರ್ಷಗಳಲ್ಲಿ ಕೊರೊನಾ ಎಂಬ ಚಿಕ್ಕ ವೈರಸ್ ನಮ್ಮ ಜೀವನವನ್ನೂ, ನಾವು ಯೋಚನೆ ಮಾಡುವ ರೀತಿಯನ್ನೂ, ನಮ್ಮ ವೈದ್ಯಕೀಯ ವ್ಯವಸ್ಥೆಯನ್ನೂ ಬಹಳಷ್ಟು ಬದಲಾಯಿಸಿದೆ. ಸಾಂಕ್ರಾಮಿಕ ಕಾಯಿಲೆಗಳು ಕೇವಲ ವೈದ್ಯಕೀಯ ವಿದ್ಯಮಾನ ಅಲ್ಲ. ಇಂಥ ಕಾಯಿಲೆಗಳು ಬಂದಾಗ ದೇಹಕ್ಕೆ ಹೇಗೆ ಬೇರೆ ಬೇರೆ ಥರದಲ್ಲಿ ತೊಂದರೆಯಾಗುತ್ತದೆಯೋ, ಹಾಗೆಯೇ ನಮ್ಮ ಜೀವನಶೈಲಿಯನ್ನು, ನಾವು ಯೋಚನೆ ಮಾಡುವ ರೀತಿಯನ್ನು, ನಮ್ಮ ಮನಸ್ಸನ್ನು, ನಮ್ಮ ಮಕ್ಕಳನ್ನು ಎಲ್ಲವನ್ನೂ ಅದು ಬದಲಾಯಿಸಿಬಿಡುತ್ತದೆ.

ಈ ಎರಡು ವರ್ಷಗಳಲ್ಲಿ ಇಂಥ ಬದಲಾವಣೆಗಳನ್ನು ನಾವು ಕಾಣುತ್ತಿದ್ದೇವೆ. ಮೊದಲ ಸಲ ಕೋವಿಡ್ ಬಂದಾಗ, ನಮಗೆ ಈ ಕಾಯಿಲೆ ಬಗ್ಗೆ ಅರಿವು ಇರಲಿಲ್ಲ. ಕೊರೊನಾ ಎಂದರೆ ಏನು? ಇದರಿಂದ ಏನಾಗುತ್ತದೆ? ಎಂಬುದು ನಮಗೆ ಗೊತ್ತಿರಲಿಲ್ಲ. ಇದರಿಂದ ಪಾರಾಗುವುದಕ್ಕೆ ಬೇಕಾದ ಔಷಧಿಗಳನ್ನು ಕಂಡುಹಿಡಿಯುವ, ವೈರಸ್ ವಾಕ್ಸೀನ್ ಕಂಡುಹಿಡಿಯುವ ಪ್ರಯತ್ನದಲ್ಲಿಯೇ ನಮ್ಮ ಬಹಳಷ್ಟು ಸಮಯ ಕಳೆದುಹೋಗಿಬಿಟ್ಟಿತು. ಆಗಿನ ಸವಾಲುಗಳೇ ಬೇರೆ ಇದ್ದವು. ಮಕ್ಕಳನ್ನು ಶಾಲೆಗೆ ಕಳಿಸಬೇಕಾ, ಕಳಿಸಬಾರದಾ? ಆ ಮಕ್ಕಳು ಮನೆಯಲ್ಲಿರಬೇಕಾದರೆ ವಿದ್ಯಾಭ್ಯಾಸದ ವಿಧಾನವನ್ನು ಹೇಗೆ ಹೊಸದಾಗಿ ರೂಪಿಸಬೇಕು? ಆನ್‌ಲೈನ್ ಕ್ಲಾಸ್‌ಗಳು ಹೇಗಿರುತ್ತವೆ? ಅವುಗಳನ್ನು ಹೇಗೆ ಮ್ಯಾನೇಜ್ ಮಾಡುವುದು? ಈ ಎಲ್ಲ ಸವಾಲುಗಳು 2020ರಲ್ಲಿ ಇದ್ದವು. '2020ರ ಅಂತ್ಯಕ್ಕೆ ಕೊರೊನಾ ಕಾಯಿಲೆ ಹೊರಟುಹೋಗುತ್ತದೆ. ನಾವು ನಮ್ಮ ಸಹಜಜೀವನಕ್ಕೆ ಮರಳುತ್ತೇವೆ' ಎಂದು ನಂಬಿಕೊಂಡು ಬದುಕು ಸಾಗಿಸುತ್ತಿದ್ದಾಗಲೇ ಕೊರೊನಾದ ಎರಡನೇ ಅಲೆ ಬಂದಿದೆ. ಹಾಗಾಗಿಯೇ ನಮ್ಮೆಲ್ಲರ ಮನಸಿಗೆ ಬಹಳಷ್ಟು ಆಘಾತ ಆಗಿದೆ.

ಸುತ್ತಮುತ್ತ ದಿನೇದಿನೆ ಕೋವಿಡ್‌ನಿಂದ ಸಾಯುವವರ ಸಂಖ್ಯೆ ಹೆಚ್ಚುತ್ತಿದೆ. ಒಂದು ಕಡೆ, ಕಾಯಿಲೆಯಿಂದ ನರಳುತ್ತ ತಮ್ಮ ಸುತ್ತಲಿನವರು ಮತ್ತು ನೆರೆಹೊರೆಯವರು, ಕುಟುಂಬ ಸದಸ್ಯರು, ಸಂಬಂಧಿಕರು ಸಾಯುತ್ತಿರುವುದನ್ನು ನೋಡುತ್ತ ಆತಂಕಗೊಂಡಿರುವ ಜನರು. ಇನ್ನೊಂದು ಕಡೆ ನಮಗೆಲ್ಲಿ ಕೋವಿಡ್ ಬಂದುಬಿಡುತ್ತದೇನೋ ಎಂದು ಭಯಭೀತರಾಗಿರುವ ಜನರು.